# 3

# ಪ್ರಶ್ನೆ:

# “ ‘ಹೊಸ ಒಡಂಬಡಿಕೆಯ’ ಪ್ರವಾದನೆಯ ಮಹತ್ವವು ಯಾವುದು?”

## ಉತ್ತರ:

ಕ್ರಿಸ್ತನ ಸಭೆಯನ್ನು ಎದುರು ನೋಡಿದಂಥ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ನಾವು ವಿಚಾರಿಸುವಾಗ, ಒಂದಕ್ಕೆ ವಿಶೇಷ ಗಮನಿಸುವಿಕೆಯ ಅಗತ್ಯತೆಯಿದೆ: ಅದು “ಹೊಸ ಒಡಂಬಡಿಕೆಯ” ಬಗ್ಗೆ ಪ್ರವಾದನೆ. ಮೋಶೆಯ ಹಳೇ ಒಡಂಬಡಿಕೆಯ ಮತ್ತು ಕ್ರಿಸ್ತನ ಹೊಸ ಒಡಂಬಡಿಕೆಯ ಮಧ್ಯದಲ್ಲಿ ಅನೇಕ ಭಿನ್ನತೆಗಳಿರುತ್ತವೆ. ಎರಡರ ಕರ್ತೃ ಒಬ್ಬ ದೇವರೇ ಆಗಿರುತ್ತಾನೆ ಮತ್ತು ಹೊಸ ಒಡಂಬಡಿಕೆಯು ಹಳೇ ಒಡಂಬಡಿಕೆಯಿಂದ ಬೆಳೆದು ಬಂದಿತು.

ಸುಮಾರು ಸೀನಾಯಿಯಲ್ಲಿ ಮೋಶೆಯ ಒಡಂಬಡಿಕೆ ಪ್ರಾರಂಭವಾದ ಮೇಲೆ ಒಂಭತ್ತು ನೂರು ವರ್ಷಗಳ ನಂತರ (ಸುಮಾರು 1446 ಕ್ರಿ.ಪೂ.), ಅದು ಶಿಲುಬೆಗೆ ನೇತು ಹಾಕಲ್ಪಡುವ ಮೊದಲು (ಕೊಲೊಸ್ಸೆ 2:14) ಕೆಲವು ಆರು ನೂರು ವರ್ಷದ ಸುಮಾರಿಗೆ (ಕ್ರಿ.ಪೂ. 597), ದೇವರು ತನ್ನ ಜನಾಂಗಕ್ಕೆ ಹೊಸ ಒಡಂಬಡಿಕೆಯನ್ನು ವಾಗ್ದಾನ ಮಾಡಿದನು. ಅನಾತೋತ್‌ನ ಯಾಜಕನಾದ ಯೆರೆಮೀಯನನ್ನು, ಈ ಕ್ರಾಂತಿಕಾರಕ, ಮುಂತಿಳಿಸುವಿಕೆಯ ಸಂದೇಶವನ್ನು ಕೊಡಲು ನೇಮಿಸಿದನು:

> ... ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈ ಹಿಡಿದು ಐಗುಪ್ತ ದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದ್ದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೇ ... ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು; ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು - “ಯೆಹೋವನ ಜ್ಞಾನವನ್ನು ಪಡೆಯಿರಿ” ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ (ಯೆರೆಮೀಯ 31:31-34).

ಹೊಸ ನಿಯಮದ, ಇಲ್ಲವೇ ಒಡಂಬಡಿಕೆಯ ಗುಣಲಕ್ಷಣವು ನಾಲ್ಕು ರೀತಿಯ ಹೊಸತನವಾಗಿರುವುದು: (1) ಅದು ಹೃದಯದ ಮೇಲೆ ಬರೆಯಲ್ಪಡುವುದು (ವಚನ 33ಬಿ), (2) ಅದು ದೇವರ ಮತ್ತು ಆತನ ಜನರ ಮಧ್ಯದಲ್ಲಿಯ ವೈಯಕ್ತಿಕ ಸಂಬಂಧದ ಮೇಲೆ ಪರಿಣಾಮ ಮಾಡುವುದು (ವಚನ 33ಸಿ), (3) ಅದು ಕರ್ತನನ್ನು ತಿಳಿದ ಜನರೊಂದಿಗೆ ಮಾತ್ರವೇ ಇರುವುದು (ವಚನ 34ಎ), ಮತ್ತು (4) ಅದು ಅವರ ಪಾಪಗಳ ಸಂಪೂರ್ಣ ಪರಿಹಾರವನ್ನು ಘೋಷಿಸುವುದು (ವಚನ 34ಬಿ).

## ಒಂದು ಹೃದಯದ ಮೇಲೆ - ಬರೆದ ಒಡಂಬಡಿಕೆ

ಹಳೇ ಒಡಂಬಡಿಕೆಯು ಒಂದು ಪುಸ್ತಕದಲ್ಲಿ, ಐಗುಪ್ತದ ಪೇಪರಿನ ಸುರುಳಿಗಳ ಮೇಲೆ (papyrus bark) ಮತ್ತು ಕಲ್ಲಿನ ಎರಡು ಹಲಿಗೆಗಳ ಮೇಲೆ ಬರೆಯಲ್ಪಟ್ಟಿತು (ವಿಮೋಚನಕಾಂಡ 24:4-7, 12; 34:28). ಇದಕ್ಕೆ ವಿರುದ್ಧವಾಗಿ, ಹೊಸ ಒಡಂಬಡಿಕೆಯು ಜನರ ಹೃದಯಗಳ ಮೇಲೆ ಬರೆಯಲ್ಪಡಬೇಕಾಗಿತ್ತು. ಹಳೇ ಒಡಂಬಡಿಕೆಯು ಬಾಹ್ಯವಾಗಿ ಬರೆಯಲ್ಪಟ್ಟಿತು, ಆದರೆ ಹೊಸ ಒಡಂಬಡಿಕೆಯು ಆಂತರಿಕವಾಗಿ ಬರೆಯಲ್ಪಡುವುದು. ಮೊದಲನೆಯದು ಹೊರಗೆ ಬರೆಯಲ್ಪಟ್ಟಿತು, ಎರಡನೆಯದು "ಒಳಗೆ" ಬರೆಯಲ್ಪಡಬೇಕಾಗಿತ್ತು. ಮೊದಲನೆಯದು ದೈಹಿಕವಾಗಿತ್ತು, ಆದರೆ ಎರಡನೆಯದು ಆತ್ಮಿಕವಾದದ್ದಾಗಿರಬೇಕಾಗಿತ್ತು. ಮೊದಲನೆಯದು ದೃಶ್ಯವಾಗಿತ್ತು ಮತ್ತು ಎರಡನೆಯದು ಅದೃಶ್ಯವಾದದ್ದಾಗಬೇಕಾಗಿತ್ತು.

ಒಬ್ಬನ ಹೃದಯದ ಮೇಲೆ ಹೇಗೆ ಬರೆಯಲ್ಪಡುತ್ತದೆ ಎಂಬುದು, ಯೋಚಿಸದೇ ಶಾಲೆಯ ವಲಯದಲ್ಲಿ ತಾಸಿಗೆ ಮುವತ್ತೈದು ಮೈಲು ವೇಗದಲ್ಲಿ ವಾಹನ ಚಲಿಸಿದ ವಾಹನ ಚಾಲಕನಿಂದ ಉದಾಹರಿಸಲ್ಪಟ್ಟಿದೆ. ಫಕ್ಕನೇ, ನಿಲ್ಲಿಸಿದ ಎರಡು ಕಾರುಗಳ ಮಧ್ಯದಿಂದ ಒಬ್ಬ ಚಿಕ್ಕ ಬಾಲಕನು ಬೀದಿಯ ಮೇಲೆ ಓಡಿಬಂದನು. ವಾಹನ ಚಾಲಕನು ಕೂಡಲೇ ಬ್ರೇಕ್ ಹಾಕಿ ವಾಹನ ನಿಲ್ಲಿಸಿದನು. ಕಾರು ಬಾಲಕನನ್ನು ಮುಟ್ಟುವಂತೆ ಇತ್ತು. ಬಾಲಕನನ್ನು ಕೊಲ್ಲುವಷ್ಟು ಸಮೀಪಕ್ಕೆ ಬಂದಿತು. ಚಾಲಕನು ಭಯಗೊಂಡನು ಬೆವರು ಸುರಿಯಲಾರಂಭಿಸಿತು. ಅಂದಿನಿಂದ ಅವನಿಗೆ, "ಶಾಲೆಯ ವಲಯ - ತಾಸಿಗೆ 15 ಮೈಲು" ಎಂಬ ಸಂಕೇತ ಹಲಿಗೆ ಬೀದಿಯ ಪಕ್ಕದಲ್ಲಿ ಬಾಹ್ಯವಾಗಿ ಇರುವದರ ಅವಶ್ಯಕತೆ ಅವನಿಗೆ ಬೇಕಾಗಲಿಲ್ಲ. ಆ ಕ್ಷೇತ್ರದಲ್ಲಿ ನಿಧಾನವಾಗಿ, ಜಾಗರೂಕತೆಯಿಂದ ವಾಹನ ಚಲಿಸುವ ನಿಯಮವು ಈ ದಿನದ ನಂತರ ಅವನ ಹೃದಯದ ಮೇಲೆ ಬರೆಯಲ್ಪಟ್ಟಿತು.

### ಹೊಸ ಮರಣ ಶಾಸನವು "ನೂತನ ಒಪ್ಪಂದ" ಆಗಿರುವದಿಲ್ಲ

ಇಪ್ಪತ್ತೇಳು ಪುಸ್ತಕಗಳನ್ನು ಒಂದುಗೂಡಿಸಿ "ನಮ್ಮ ಕರ್ತನ ಮತ್ತು ರಕ್ಷಕನ ಹೊಸ ಒಡಂಬಡಿಕೆ" ಎಂಬ ಶೀರ್ಷಿಕೆ ಅಚ್ಚು ಹಾಕಿದ್ದನ್ನು ಹೊಸ ಒಡಂಬಡಿಕೆಯಂತೆ ನೋಡುವವನು ತಪ್ಪಾಗಿ ತಿಳುಕೊಂಡವನಾಗಿರುತ್ತಾನೆ. ಈ ಇಪ್ಪತ್ತೇಳು ಪುಸ್ತಕಗಳು ಅಮೂಲ್ಯವಾದವುಗಳಾಗಿವೆ, ಆದರೆ ಅವು ಹೊಸ ಒಡಂಬಡಿಕೆ, ಇಲ್ಲವೇ ಒಪ್ಪಂದ ಆಗಿರುವದಿಲ್ಲ. ಅವುಗಳಿಲ್ಲದೆ, ಯಾರೂ ಹೊಸ ಒಪ್ಪಂದದ ಬಗ್ಗೆ ತಿಳಿದು ಕೊಳ್ಳಲಾರನು, ಆದರೆ ಅವು ತಾನೇ ಹೊಸ ಒಪ್ಪಂದವಾಗಿರುವುದಿಲ್ಲ. ಯೇಸುಕ್ರಿಸ್ತನ ಪುನರುತ್ಥಾನದ ನಂತರದ ಪ್ರಥಮ ಪಂಚಾಶತ್ತಮ ದಿನದಂದು ಹೊಸ ಒಡಂಬಡಿಕೆಯ ಉದ್ಘಾಟನೆಯ ಸಮಯದಲ್ಲಿ ಒಂದು ಪುಸ್ತಕದ ಮೇಲೆ ಇಲ್ಲವೇ ಜನರ ಮೇಲೆ ರಕ್ತವು ಚಿಮುಕಿಸಲ್ಪಡಲಿಲ್ಲ (ನೋಡಿರಿ ಇಬ್ರಿಯ 9:19, 20), ಹಳೇ ಒಪ್ಪಂದದ ಉದ್ಘಾಟನೆಯ

ಸಮಯದಲ್ಲಿ ಮಾಡಲ್ಪಟ್ಟಂತೆ ಮಾಡಲ್ಪಡಲಿಲ್ಲ.

**ಪಂಚಾಶತ್ತಮದ ಹೊಸ ಒಡಂಬಡಿಕೆ**

ಸಿನಾಯಿ ಪರ್ವತದ ಮೇಲೆ ಶುದ್ಧೀಕರಿಸಲ್ಪಟ್ಟ ಬರಹದ ಹಲಿಗೆಗೆ ವ್ಯತಿರಿಕ್ತವಾಗಿ ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಚೀಯೋನ್ ಪರ್ವತದ ಮೇಲೆ ಶುದ್ಧೀಕರಿಸಲ್ಪಟ್ಟ ಹೃದಯಗಳ ಮೇಲೆ ಬರೆಯಲ್ಪಟ್ಟಿತು. ಆತ್ಮನ ಪ್ರೇರೇಪಿತ ಮಾತುಗಳು ಪೇತ್ರನ ಬಾಯ ಮುಖಾಂತರ ಬಂದವು (ಅಪೊಸ್ತಲರ ಕೃತ್ಯಗಳು 2:4, 14, 22), ಕೇಳಲ್ಪಟ್ಟವು ಮತ್ತು ಸಂತೋಷದಿಂದ ಸ್ವೀಕರಿಸಲ್ಪಟ್ಟವು (ಅಪೊಸ್ತಲರ ಕೃತ್ಯಗಳು 2:37, 41; KJV). ಆ ದಿನ ಮೂರು ಸಾವಿರ ಜನರ ಹೃದಯಗಳ ಮೇಲೆ ಬರೆಯಲ್ಪಟ್ಟಿತು. ಅಲ್ಲಿ ಬರೆಯಲ್ಪಟ್ಟಂಥದ್ದು ಯೇಸುವಿನ ಒಡೆತನ ಮತ್ತು ಆತನ ಸೇವೆ ಮಾಡುವ ಸಮರ್ಪಣೆ, ಅವರು ಬಾಪ್ತಿಸ್ಮ ಹೊಂದಿದಾಗ, ಹೊಸ ಒಡಂಬಡಿಕೆಯೊಳಗೆ ಸ್ವಾಗತಿಸಲ್ಪಟ್ಟಾಗ, ಅವರ ದೇಹಗಳು ಪ್ರಾಣಿಗಳ ರಕ್ತದಿಂದ ಚಿಮುಕಿಸಲ್ಪಡಲಿಲ್ಲ, ಆದರೆ ಅವರ ಹೃದಯಗಳು ಆತ್ಮಿಕವಾಗಿ ಯೇಸುವಿನ ರಕ್ತದಿಂದ ಚಿಮುಕಿಸಲ್ಪಟ್ಟವು (ಇಬ್ರಿಯ 10:22; 12:24; 1 ಪೇತ್ರ 1:2). ಮೂರು ಸಾವಿರ ಜನರು ವಾಕ್ಯವನ್ನು - ಬಾಹ್ಯವಾಗಿ ಬರೆದ ವಾಕ್ಯವನ್ನಲ್ಲ, ಆದರೆ ಪೇತ್ರನು ಪ್ರಸಂಗಿಸಿದ ಸಂದೇಶವನ್ನು ಸ್ವೀಕರಿಸಿದರು. ಈ ಸಂದೇಶವನ್ನು ಅವರು ತಮ್ಮ ಹೃದಯಗಳೊಳಗೆ ತೆಗೆದು ಕೊಂಡಿದ್ದರು. ಅದು ಇಪ್ಪತ್ತೇಳು ಪುಸ್ತಕಗಳಲ್ಲಿ ಮೊದಲನೆಯದು ಬರೆಯಲ್ಪಡುವದಕ್ಕಿಂತ ಸುಮಾರು ಹದಿನೈದು ವರ್ಷಗಳ ಮೊದಲು, ಮತ್ತು ಇಪ್ಪತ್ತೇಳು ಪುಸ್ತಕಗಳಲ್ಲಿ ಕೊನೆಯದು ಬರೆಯಲ್ಪಡುವದಕ್ಕಿಂತ ಸುಮಾರು ಅರವಾತ್ತಾರು ವರ್ಷಗಳ ಮೊದಲು ಅದಾಗಿತ್ತು (ಪ್ರಕಟನೆ, ಸುಮಾರು ಕ್ರಿ.ಶ. 96). ಹೀಗಿದ್ದರೂ, ಮೂರು ಸಾವಿರ ಜನರು ತಮ್ಮ ಹೃದಯಗಳಲ್ಲಿ ಆಂತರಿಕವಾಗಿ ಬರೆಯಲ್ಪಟ್ಟದ್ದನ್ನು ಅನುಭವಿಸಿದರು.

ನಿಜವಾಗಿಯೂ, ಆ ದಿನ ಮೂರು ಸಾವಿರ ಜನರ ಒಪ್ಪಂದಗಳು ಮಾಡಲ್ಪಟ್ಟವು. ಪೇತ್ರನ ಪ್ರಬೋಧನೆಗಳಿಗೆ ಉತ್ತರ ಕೊಡುತ್ತಿದ್ದ ಪ್ರತಿಯೊಬ್ಬನು ಯೇಸುವಿನೊಂದಿಗೆ ಒಂದು ಒಪ್ಪಂದದಲ್ಲಿ, ಒಂದು ಒಡಂಬಡಿಕೆಯಲ್ಲಿ ಪ್ರವೇಶಿಸುತ್ತಿದ್ದನು. ಬೇರೆ ಎಷ್ಟು ಹೆಚ್ಚು ಜನರು ಇಲ್ಲವೇ ಕಡಿಮೆ ಜನರು ತೀರ್ಮಾನಿಸಿಕೊಂಡರೆಂಬುದರ ಕಡೆಗೆ ಗಮನ ಕೊಡದೇ, ಪ್ರತಿಯೊಬ್ಬನು ಯೇಸುವನ್ನು ಕರ್ತನಂತೆ ಹಿಂಬಾಲಿಸಲು ವೈಯಕ್ತಿಕ ಸಮರ್ಪಣೆಯನ್ನು ಮಾಡಿಕೊಳ್ಳುತ್ತಿದ್ದನು. ಬೇರೆಯವರು ಮಾಡಿದ ಕಾರಣದಿಂದ ಯಾರೂ ಉತ್ತರ ಕೊಡುತ್ತಿದ್ದಿಲ್ಲ; ಯೇಸುವು ಅವನ ಹೃದಯದಲ್ಲಿ ಬರೆದದ್ದರಿಂದ ಪ್ರತಿಯೊಬ್ಬನು ಉತ್ತರ ಕೊಡುತ್ತಿದ್ದನು. ಈ ನೋಟದಿಂದ, ಆ ದಿನ ಮೂರು ಸಾವಿರ ವ್ಯಕ್ತಿಗಳ ವೈಯಕ್ತಿಕ ಒಡಂಬಡಿಕೆಗಳು ಇಲ್ಲವೇ ಒಪ್ಪಂದಗಳು ಪೂರೈಸಲ್ಪಟ್ಟವು. ಪ್ರತಿಯೊಂದು ಬೇರೆಯಾಗಿದ್ದರೂ ಮತ್ತು ಉಳಿದ ಎಲ್ಲರಿಗಿಂತ ಸ್ವತಂತ್ರವಾಗಿದ್ದರೂ, ಮೂರು ಸಾವಿರ ಒಡಂಬಡಿಕೆಗಳು ಒಂದೇ ಒಡಂಬಡಿಕೆಯಾಗಿದ್ದವು.

**ಮಸಿಯಿಂದ ಅಲ್ಲ**

ಇಪ್ಪತ್ತೇಳು ಪುಸ್ತಕಗಳ ಮುಂದೆ "ನಮ್ಮ ಕರ್ತನೂ ರಕ್ಷಕನೂ ಆದ ಯೇಸುಕ್ರಿಸ್ತನ ಹೊಸ ಒಡಂಬಡಿಕೆ" ಎಂದು ಪರಿಶುದ್ಧಾತ್ಮನು ಬರೆಯಲಿಲ್ಲ. ಒಬ್ಬ ಪ್ರಿಂಟರ್ ಅದನ್ನು ಅಷ್ಟು ತಪ್ಪಾಗಿ ಮಾಡಿದನು. ಎರಡು ಒಡಂಬಡಿಕೆಗಳ ಮಧ್ಯದಲ್ಲಿ ಭಿನ್ನತೆಯು ಪ್ರತಿಯೊಂದು ಬರೆಯಲ್ಪಟ್ಟ ಸ್ಥಳ ಎಂಬದನ್ನು ಅವನು ಗುರತಿಸಲಿಲ್ಲ. ಮೊದಲನೆಯ ಒಡಂಬಡಿಕೆಯು ಬಾಹ್ಯವಾಗಿ ಒಂದು ಪುಸ್ತಕದಲ್ಲಿ ಬರೆಯಲ್ಪಟ್ಟಿತು ಮತ್ತು

ಎರಡನೆಯದು ಆಂತರಿಕವಾಗಿ ಹೃದಯದ ಮೇಲೆ ಬರೆಯಲ್ಪಟ್ಟಿತು ಎಂಬ ದೈವಿಕ ವಿಚಾರವನ್ನು ಮೊಬ್ಬಾಗಿಸಿದನು. ಪ್ರಿಂಟರ್‌ನ ಮಾತುಗಳು ಹಳೇ ಒಡಂಬಡಿಕೆಯ ಮೂವತ್ತೊಂಭತ್ತು ಪುಸ್ತಕಗಳು ಒಂದು ಪ್ರತಿರೂಪ, ಹೊಸ ಒಡಂಬಡಿಕೆಯ ಇಪ್ಪತ್ತೇಳು ಪುಸ್ತಕಗಳಿಗೆ ಸಮಾಂತರತೆಯುಳ್ಳವುಗಳು ಎಂದು ಜನರು ನೋಡುವಂತೆ ತಪ್ಪಾಗಿ ನಡಿಸುತ್ತವೆ.

ಪ್ರಿಂಟರ್‌ನ ಮಾತುಗಳು 2 ಕೊರಿಂಥ 3:3ರಿಂದ ವಿರೋಧಿಸಲ್ಪಟ್ಟಿವೆ: "ಅದು ಮಸಿಯಿಂದ ಬರೆದದ್ದಲ್ಲ, ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು; ಕಲ್ಲಿನ ಮೇಲೆ ಅಲ್ಲ, ಮನುಷ್ಯ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು." ಇಪ್ಪತ್ತೇಳು ಪುಸ್ತಕಗಳ ಲೆದರ್‌ಬೌಂಡ ಗ್ರಂಥವು ಮಸಿಯಿಂದ ಬರೆಯಲ್ಪಟ್ಟಿದೆ. ಅದು ಅಸ್ತಿತ್ವದಲ್ಲಿರುವ ಅತೀ ಮುಖ್ಯವಾದ ಗ್ರಂಥವಾಗಿದ್ದರೂ, ಮತ್ತು ಅದಿಲ್ಲದೇ ರಕ್ಷಣೆಯು ಅಸಾಧ್ಯವಾಗಿದ್ದುದರಿಂದ (ಯೋಹಾನ 6:63), ಅದು ಹೊಸ ಒಡಂಬಡಿಕೆಯಾಗಿರುವದಿಲ್ಲ. ಹೊಸ ಒಡಂಬಡಿಕೆಯು ಮಸಿಯಿಂದ ಬರೆಯಲ್ಪಟ್ಟಿರುವುದಿಲ್ಲ, ಆದರೆ ಅತ್ಮನಿಂದ ಬರೆಯಲ್ಪಟ್ಟಿದೆ. ಪಂಚಾಶತ್ತಮ ದಿನದಂದು, ಮಾಂಸದ ಹಲಗೆಗಳ ಮೇಲೆ - ಹೃದಯಗಳ ಮೇಲೆ ಪೇತ್ರನ ಮಾತುಗ ಳೊಂದಿಗೆ ಆತ್ಮನು ಬರೆದನು. ಇಂದು ಆತ್ಮನು ಅದೇ ಸಂಗತಿಯನ್ನು ಪೇತ್ರನ ಲಿಖಿತ ಮಾತುಗಳ (ಅಪೊಸ್ತಲರ ಕೃತ್ಯಗಳು 2ರಲ್ಲಿ ಲೂಕನಿಂದ ದಾಖಲೆ ಮಾಡಲ್ಪಟ್ಟ) ಮುಖಾಂತರ ಮಾಡುತ್ತಾನೆ.

ಇಪ್ಪತ್ತೇಳು ಪುಸ್ತಕಗಳು ಪೇಪರಿನ ಮೇಲೆ ಮಸಿಯಿಂದ ಬರೆಯಲ್ಪಡುವದಕ್ಕೆ ಪರಿಶುದ್ಧಾತ್ಮನು ಕಾರಣನಾದನು, ಆದರೆ ಅವು ಹೊಸ ಒಡಂಬಡಿಕೆಯಾಗಿರುವದಿಲ್ಲ. ಆ ಇಪ್ಪತ್ತೇಳು ಪುಸ್ತಕಗಳಲ್ಲಿಯ ಸಂದೇಶವು ಓದಲ್ಪಟ್ಟಾಗ, ಮತ್ತು ಕೈಕೊಳ್ಳಲ್ಪಟ್ಟಾಗ, ಹೊಸ ಒಡಂಬಡಿಕೆಯು ಪರಿಣಾಮಗೊಂಡಿದೆ ಎಂದು ಹೇಳಬಹುದು. ಆ ಇಪ್ಪತ್ತೇಳು ಪುಸ್ತಕಗಳ ಸಂದೇಶವು ಓದಲ್ಪಟ್ಟಾಗ, ಸ್ವೀಕರಿಸಲ್ಪಟ್ಟಾಗ ಮತ್ತು ಕೈಕೊಳ್ಳಲ್ಪಟ್ಟಾಗ, ಪರಿಶುದ್ಧಾತ್ಮನು ಹೃದಯದ ಮಾಂಸದ ಹಲಿಗೆಗಳಲ್ಲಿ ಬರೆದಿದ್ದಾನೆಂದು ಹೇಳ ಬಹುದು.

ಒಂದು ಮದುವೆಯಲ್ಲಿ, ಮದುಮಗಳು ಸುಂದರವಾದ ಬಿಳಿಬಣ್ಣದ, ಲೆದರ್ - ಬೌಂಡ ಬೈಬಲನ್ನು ಹಿಡಿದುಕೊಂಡು ಬರತ್ತಿದ್ದನ್ನು ನೋಡಿ, ಜನರು ಉದ್ವೇಗ ಗೊಂಡರು. ಅನಂತರದಲ್ಲಿ ಫೋಟೊಗ್ರಾಫರನು ಆ ಬಿಳಿ ಬೈಬಲನ್ನು ಮದು ಮಕ್ಕಳಿಬ್ಬರು ಹಿಡಿದುಕೊಂಡಿದ್ದ ಫೋಟೊ ತೆಗೆದನು. "ಬೈಬಲ್ ನಮ್ಮ ಮನೆಯ ಅಸ್ತಿವಾರವಾ ಗಿರುವುದು" ಎಂದು ಆ ದಂಪತಿಗಳು ಹೇಳುವಂತಿತ್ತು. ಒಂದು ಮನೆಯನ್ನು ಮಾಡಲು ಮಸಿಯಿಂದ ಬರೆಯಲ್ಪಟ್ಟ ಬಿಳಿ ಚರ್ಮದ ಪುಸ್ತಕಕ್ಕಿಂತಲೂ ಹೆಚ್ಚಿನದು ಬೇಕಾಗುತ್ತದೆ. ಆ ಪುಸ್ತಕದಲ್ಲಿ ಬರೆಯಲ್ಪಟ್ಟದ್ದು ಅವರ ಹೃದಯಗಳಲ್ಲಿ ಬರೆಯಲ್ಪಟ್ಟಿರಲಿಲ್ಲ. ತಮ್ಮ ಮಧು ಚಂದ್ರಕ್ಕೂ ಅವರು ತಮ್ಮ ಬೈಬಲನ್ನು ತೆಗೆದುಕೊಂಡು ಹೋದರು, ಆದರೆ ಅವರು ಅದನ್ನು ಓದಲಿಲ್ಲ. ಮನೆಯಲ್ಲಿ ಮುಂದಿನ ಕೋಣೆಯಲ್ಲಿ ಮಹತ್ವದ ಸ್ಥಳ ಕೊಟ್ಟರು, ಆದರೆ ಅದು ತೆರೆಯಲ್ಪಡಲಿಲ್ಲ. ಒಟ್ಟಾಗಿ ಕುಟುಂಬ ಪ್ರಾರ್ಥನೆ, ಪರಿಶುದ್ಧ ಬರಹಗಳನ್ನು ಓದುವುದು ಆ ಕುಟುಂಬದಲ್ಲಿ ಇರಲೇ ಇಲ್ಲ. ಕೆಲವು ತಿಂಗಳುಗಳ ನಂತರ ಯುವಕನು ಬೇರೆ ಮಹಿಳೆಯಿಂದ ಆಕರ್ಷಿಸಲ್ಪಟ್ಟನು, ಅವನ ಹೆಂಡತಿ ವಿವಾಹ ವಿಚ್ಛೇದನಕ್ಕಾಗಿ ನ್ಯಾಯಾಲಯಕ್ಕೆ ಹೋದಳು. ಇನ್ನೂ ಆಕೆಯ ಬಿಳಿ ಬಣ್ಣದ ಬೈಬಲ್ ಸುರಕ್ಷಿತವಾಗಿ ಇಡಲ್ಪಟ್ಟಿತು, ಆದರೆ ಅದು ಆಕೆಗೆ ಆನಂದದ ಬದಲು ಕಣ್ಣೀರುಗಳನ್ನು ತಂದಿತು. ಬೈಬಲಿನಲ್ಲಿ ಒಳಗೊಂಡಿರುವಂಥವುಗಳು ಹೃದಯದ ಮೇಲೆ ಬರೆಯಲ್ಪಟ್ಟವುಗಳಾಗುವವರೆಗೆ, ಅದು ಬಲವಿಲ್ಲದ್ದಾಗಿರುತ್ತದೆ. ಲಿಖಿತ ದೇವರ ವಾಕ್ಯವು ಯಥಾರ್ಥವಾದ ಮತ್ತು ಒಳ್ಳೆಯ

ಹೃದಯಗಳು ಇರುವವರಿಗೆ ಮಾತ್ರ ಸಜೀವವಾದದ್ದೂ, ಕಾರ್ಯಸಾಧಕವಾದದ್ದೂ ಆಗಿರುತ್ತದೆ (ಇಬ್ರಿಯ 4:12; ಲೂಕ 8:15).

## ಒಂದು ವೈಯಕ್ತಿಕ ಸಂಬಂಧ

ಹಳೇ ಮತ್ತು ಹೊಸ ಒಡಂಬಡಿಕೆಗಳ ಮಧ್ಯದಲ್ಲಿ ಮೊದಲನೆಯ ಭಿನ್ನತೆಯು ಒಡಂಬಡಿಕೆಯು ಬರೆಯಲ್ಪಟ್ಟ ಸ್ಥಳದಲ್ಲಿತ್ತು. ಎರಡನೆಯ ಭಿನ್ನತೆಯೂ ದೇವರಿಗೂ ಮತ್ತು ಆತನ ಒಡಂಬಡಿಕೆಯ - ಜನರ ಮಧ್ಯದಲ್ಲಿ ಅಸ್ತಿತ್ವದ ಸಂಬಂಧದ ರೀತಿಯಲ್ಲಿ ಇತ್ತು: "ನಾನು ಅವರ ದೇವರಾಗಿರುವೆನು ಮತ್ತು ಅವರು ನನ್ನ ಪ್ರಜೆಗಳಾಗಿರುವರು" (ಯೆರೆಮೀಯ 31:33ಸಿ) . ಪರಲೋಕದ ತಂದೆಯು, ಸೃಷ್ಟಿಯ ಪ್ರಾರಂಭದಿಂದಲೂ, ತನಗೂ ಮತ್ತು ತನ್ನ ಸ್ವರೂಪದಲ್ಲಿ ಮಾಡಲ್ಪಟ್ಟವರಿಗೂ ಮಧ್ಯದಲ್ಲಿ ವೈಯಕ್ತಿಕ ಅನ್ಯೋನ್ಯತೆಯು ಯಾವಾಗಲೂ ಇರಬೇಕೆಂದು ಬಯಸಿದ್ದನು. ಇದು ಏದೆನ್‌ನಲ್ಲಿ ಇರಬೇಕೆಂದು ಬಯಸಿದ್ದನು ಮತ್ತು ಮನುಷ್ಯನ ಪಾಪವು ಇದನ್ನು ಅಸಾಧ್ಯವಾದದ್ದನ್ನಾಗಿ ಮಾಡುವವರೆಗೆ ಮುಂದುವರಿಸಿದ್ದನು. ಇದಾದನಂತರ, ಕೆಲವರು ಮಾತ್ರವೇ ತಂದೆಯೊಂದಿಗೆ ನಿಕಟವಾದ, ವೈಯಕ್ತಿಕ ಸಂಬಂಧವನ್ನು ಅನುಭವಿಸಿದರು. ಅಂಥವರಲ್ಲಿ ಹನೋಕನು ಒಬ್ಬನಾಗಿದ್ದಾನೆ. ಸುಮಾರು ಮುನ್ನೂರು ವರ್ಷಗಳ ವರೆಗೆ (ಆದಿಕಾಂಡ 5:22), ಅವನು ದೇವರೊಂದಿಗೆ ನಡೆದನು - ಆದಾಮನಂತೆ ತೋಟದಲ್ಲಿ ದೈಹಿಕವಾಗಿ ಅಲ್ಲ, ಆದರೆ ಆತ್ಮಿಕ ಅನ್ಯೋನ್ಯತೆಯಲ್ಲಿ. ಇತರರೂ ಸಹ (ಸಮುವೇಲ, ಯೋಸೇಫ, ದಾವೀದ ಮತ್ತು ದಾನಿಯೇಲನಂಥವರು) ಅನುದಿನವೂ ತಮ್ಮ ದೇವರೊಂದಿಗೆ ನಿಕಟ ಸಂಬಂಧದಲ್ಲಿ ಜೀವಿಸಿದ್ದು ಇಬ್ಬರಿಗೂ ತೃಪ್ತಿಕರವಾಗಿತ್ತು.

ಆತ್ಮಗಳ ತಂದೆಯೊಂದಿಗೆ ಮಾನವ ಆತ್ಮದ ಆನಂದಿಸುವ ಸಂಬಂಧವು, ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಸಾಧ್ಯವಾಗಿದ್ದರೂ, ಸಾಮಾನ್ಯವಾಗಿ ಅಸ್ತಿತ್ವದಲ್ಲಿರಲಿಲ್ಲ. ಹಾಗಿದ್ದರೂ ಹೃದಯದ ಮೇಲೆ ಬರೆದ ಒಡಂಬಡಿಕೆಯ ಅಧೀನತೆಯಲ್ಲಿ ಎಲ್ಲಾ ಕ್ರೈಸ್ತರು "ನಾನು ಅವರ ದೇವರಾಗಿರುವೆನು ಮತ್ತು ಅವರು ನನ್ನ ಪ್ರಜೆಗಳಾಗಿರುವರು" (2 ಕೊರಿಂಥ 6:16ಬಿ) ಎಂಬ ತಿಳುವಳಿಕೆಯಲ್ಲಿ ಜೀವಿಸುವರು ಎಂದು ತಂದೆ ಹೇಳಿದನು.

ದೇವರೂ ತನಗೂ ಮತ್ತು ವಿಧೇಯ ಆತ್ಮಕ್ಕೂ ಮಧ್ಯದಲ್ಲಿರುವ ನಿಕಟತೆಯನ್ನು ಬಯಸುವಂಥದ್ದು, "ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುತ್ತೀ" (ಯೋಹಾನ 11:42) ಎಂಬ ಯೇಸುವಿನ ಪ್ರಾರ್ಥನೆಯ ಮಾತುಗಳಲ್ಲಿ ಕಂಡು ಬರುತ್ತದೆ. ಒಬ್ಬ ತಿಳುವಳಿಕೆಯುಳ್ಳ ಕ್ರೈಸ್ತನು ತಾನು ದೇವರ ಪ್ರಸನ್ನತೆಯನ್ನು ಇಂದ್ರೀಯ ಗೋಚರವಾಗಿ ಅನುಭವಿಸುವೆನೆಂದು ತಿಳಿದಿರುವದಿಲ್ಲ, ಆದರೆ ದೇವರು ಯಾವಾಗಲೂ ಹತ್ತಿರವಾಗಿದ್ದಾನೆಂಬುದನ್ನು ನಂಬಿಕೆಯಿಂದ ತಿಳಿದಿರುವನು: "ಕರ್ತನು ಹತ್ತಿರವಾಗಿದ್ದಾನೆ" (ಫಿಲಿಪ್ಪಿ 4:5ಬಿ). ಈ ವಾಗ್ದಾನವು ಅವನಿಗೆ ಭರವಸೆಯನ್ನೂ ಆನಂದವನ್ನೂ ಎಲ್ಲಾ ಗ್ರಹಿಕೆಯನ್ನೂ ಮೀರುವ ಸಮಾಧಾನವನ್ನು ಕೊಡುವುದು (ಫಿಲಿಪ್ಪಿ 4:6, 7). ಬೇರೆ ಜನರೊಂದಿಗೆ ಇರದ ರೀತಿಯಲ್ಲಿ ದೇವರು ತಮ್ಮೊದಿಂಗೂ ವಾಸಿಸುವವನು ಎಂದು ವಿಧೇಯ ಕ್ರೈಸ್ತರು ಅರ್ಥ ಮಾಡಿಕೊಳ್ಳುತ್ತಾರೆ (ಯೋಹಾನ 14:23). "ದೇವರ ಸ್ವಂತ ಸ್ವಾಸ್ಥ್ಯದ ಜನಾಂಗ" (1 ಪೇತ್ರ 2:9) ಎಂಬಂತೆ ವಿಶೇಷವಾದ ರೀತಿಯಲ್ಲಿ ಆತನಿಗೆ ಒಳಪಟ್ಟಿರುವಂತೆ - ತಂದೆಯು ನೋಡುತ್ತಾನೆ ಎಂಬ ಅರುಹುವುಳ್ಳವರಾಗಿದ್ದಾರೆ. ತಮ್ಮ ಸಹೋದರ ಎಂದು ಕರೆಯಿಸಿಕೊಳ್ಳಲು ಯೇಸುವು ನಾಚಿಕೆಪಟ್ಟುಕೊಳ್ಳುವುದಿಲ್ಲ (ಇಬ್ರಿಯ 2:11) ಮತ್ತು ಆತನ ತಂದೆಯು ಅವರ ತಂದೆ ಎಂದು ಕರೆಯಲ್ಪಡಲು

ನಾಚಿಕೆಪಡುವದಿಲ್ಲ ಎಂದು ಅವರು ತಿಳಿದಿರುವರು; ಯಾಕಂದರೆ ಆತನು ಹೀಗೆ ಹೇಳಿರುವನು, "ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು" (2 ಕೊರಿಂಥ 6:16; ನೋಡಿರಿ ಪ್ರಕಟನೆ 21:7).

ಬೇರೆ ಯಾರಿಗಿಂತಲೂ ಚೆನ್ನಾಗಿ ತಂದೆಯನ್ನು ತಿಳಿದಿರುವ ಯೇಸುವು, ನಂಬಿಗಸ್ತ ಮಾನವರಿಗೆ, "ನಮ್ಮ ತಲೆಗೂದಲುಗಳೂ ಸಹ ಎಲ್ಲವೂ ಎಣಿಕೆಯಾಗಿವೆ" (ಮತ್ತಾಯ 10:30) ಎಂದು ಭರವಸೆ ಕೊಟ್ಟಿರುವನು. ಕೆಲವು ಜನರೊಂದಿಗೆ ದೇವರು ಬಹಳ ವಾಗಿ ಎಣಿಸಬೇಕಾಗಿರುವದಿಲ್ಲವೆಂದು ಕೆಲವರು ಹಾಸ್ಯವಾಗಿ ಒಪ್ಪಿಕೊಳ್ಳುತ್ತಾರೆ, ಆದರೆ ಯೇಸುವಿನ ಹೇಳಿಕೆಯು ದೇವರಿಗೂ ಮತ್ತು ಆತನ ಜನರಿಗೂ ಮಧ್ಯದಲ್ಲಿ ಅಸ್ತಿತ್ವದಲ್ಲಿರುವ ನಿಕಟತೆಯನ್ನೂ ಬಾಂಧವ್ಯವನ್ನೂ ಅಕ್ಕರೆ ತೋರಿಸುವಿಕೆಯನ್ನೂ ನಾವು ಅರಿತು ಕೊಳ್ಳುತ್ತೇವೆ.

## ಕರ್ತನನ್ನು ತಿಳಿದವರು

ಮೂರನೆಯ ಒಂದು ಭಿನ್ನತೆಯು ಹೊಸ ಒಡಂಬಡಿಕೆಯಲ್ಲಿ ಪ್ರತಿಯೊಬ್ಬರು ಕರ್ತನು ಯಾರು ಎಂಬುದನ್ನು ತಿಳಿದವರಾಗಿರುವರು.

*ಸಮುವೇಲ.* ಹಳೇ ಒಡಂಬಡಿಕೆಯ ಕೆಳಗೆ, ಒಂದು ಮಗುವು ಜನನದಿಂದ ದೇವರ ಜನಾಂಗದಲ್ಲಿ ಒಂದಾಗುತ್ತಿತ್ತು. ಉದಾಹರಣೆಯಾಗಿ, ಸಮುವೇಲನು ಒಡಂಬಡಿಕೆಯ - ಜನಾಂಗವಾಗಿದ್ದ ಇಬ್ಬರಿಂದ, ಇಬ್ರಿಯ ತಂದೆತಾಯಿಗಳಿಂದ, ಹುಟ್ಟಿದನು. ಇದು ತನ್ನಷ್ಟಕ್ಕೆ ತಾನೇ, ಅವನು ಕರ್ತನನ್ನೂ ತಿಳಿಯದಿದ್ದರೂ, ಮೋಶೆಯ ಒಡಂಬಡಿಕೆಯ ಭಾಗವಾನ್ನಾಗಿ ಮಾಡಿತು. ಬಾಲಕನಾಗಿದ್ದಾಗ ಅವನು ಏಲಿಯ ಜೋಪಾಸನೆಯಲ್ಲಿ ದೇವಾಲಯದಲ್ಲಿ ಬಿಡಲ್ಪಟ್ಟನು, ಅವನು ಕರ್ತನ ಬಗ್ಗೆ ಬೋಧಿಸಲ್ಪಡ ಬೇಕಾಗಿತ್ತು. ಶಿಶು ಸದಸ್ಯತ್ವವು ಹಳೇ ಒಡಂಬಡಿಕೆಯ ಮಾದರಿಯಾಗಿತ್ತು, ಆದರೆ ದೇವರು ಹೊಸ ಒಡಂಬಡಿಕೆಯ ವಿಷಯದಲ್ಲಿ ಹಾಗಿರಬಾರದೆಂದು ವಿವರಿಸಿದನು: "ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನನ್ನು ತಿಳಿದುಕೊಳ್ಳುವರು" (ಇಬ್ರಿಯ 8:11ಬಿ).

*ಪಂಚಾಶತ್ತಮ ದಿನದಂದು ಇದ್ದವರು.* ಭಿನ್ನತೆಯ ಮಾರ್ಗದಿಂದ, ಹೊಸ ಒಡಂಬಡಿಕೆಯ ಉದ್ಘಾಟನೆಯಲ್ಲಿ ಏನು ಸಂಭವಿಸಿತು ಎಂಬುದನ್ನು ಯೋಚಿಸಿರಿ. "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು" (ಅಪೊಸ್ತಲರ ಕೃತ್ಯಗಳು 2:41), ಆದರೆ ಅವರ ಶಿಶುಗಳಾಗಿದ್ದ ಮಕ್ಕಳಲ್ಲ. ಹೊಸ ಒಡಂಬಡಿಕೆಗೆ ಸೇರಿಸಲ್ಪಟ್ಟವರು ಯೇಸುಕ್ರಿಸ್ತನನ್ನು ಕರ್ತನೆಂದು ತಿಳಿದುಕೊಂಡವರು ಮಾತ್ರವೇ (ಅಪೊಸ್ತಲರ ಕೃತ್ಯಗಳು 2:36).

*ಫಿಲಿಪ್ಪಿಯ ಸೆರೆಮನೆ ಅಧಿಕಾರಿ.* ಫಿಲಿಪ್ಪಿಯಲ್ಲಿ ಸೆರೆಮನೆಯ ಅಧಿಕಾರಿಯೂ ಅವನ ಮನೆಯವರೆಲ್ಲರೂ ಬಾಪ್ತಿಸ್ಮ ಹೊಂದಿದರೆಂದು ಒಬ್ಬನು ಓದುತ್ತಾನೆ. ಆ ಮನೆಯವರಲ್ಲಿ ಕೆಲವರು ಶಿಶುಗಾಳಾಗಿದ್ದಾರೆ, ಆಗ ಕರ್ತನಿಂದ ಹೇಳಲ್ಪಟ್ಟಂತೆ ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿಯ ಭಿನ್ನತೆಯು ಪ್ರಯೇಜನವಾಗುವದಿಲ್ಲ, ಯಾಕಂದರೆ ಶಿಶುಗಳು ಕರ್ತನು ಯಾರಾಗಿದ್ದಾನೆ ಎಂಬುದನ್ನು ತಿಳಿದವುಗಾಳಾ ಗಿರುವದಿಲ್ಲ. ಸೆರೆಮನೆಯ ಅಧಿಕಾರಿಯ ಮನೆಯಲ್ಲಿ ಇದ್ದವರೆಲ್ಲರೂ ಪ್ರಸಂಗವನ್ನು ಕೇಳಿದರು (ಅಪೊಸ್ತಲರ ಕೃತ್ಯಗಳು 16:32) ಮತ್ತು ಬಾಪ್ತಿಸ್ಮದ ಮುಖಾಂತರ ಕರ್ತನಲ್ಲಿ ನಂಬಿದವರಾಗಿ ಹೊಸ ಒಡಂಬಡಿಕೆಯಲ್ಲಿ ಪಾಲುಗಾರರಾದರು ಎಂದು ಓದುತ್ತೇವೆ.

*ಸಮಾಜಿಕತೆ ಇಲ್ಲ.* ಹೊಸ ಒಡಂಬಡಿಕೆಯು ಕರ್ತನೊಂದಿಗೆ ರಾಷ್ಟ್ರೀಯ ಇಲ್ಲವೇ ಕುಟುಂಬದ ಒಪ್ಪಂದವಾಗಿರುವದಿಲ್ಲ ಎಂದು ದೇವರು ಸ್ಪಷ್ಟಪಡಿಸಿದನು. ಅದು ವ್ಯಕ್ತಿಗತವಾದದ್ದಾಗಿತ್ತು ಮತ್ತು ಒಬ್ಬ ಪಾಪಿ ಹಾಗೂ ಅವನ ರಕ್ಷಕನ ಮಧ್ಯದಲ್ಲಿ ವೈಯಕ್ತಿಕವಾದ ಒಪ್ಪಂದವಾಗಿತ್ತು. ಆತ್ಮಿಕ ಸಾಮುದಾಯಿಕತೆಯು ಕ್ರೈಸ್ತತ್ವವಾಗಿರುವದಿಲ್ಲ.

## ಪೂರ್ವವಾದ ವಿಮೋಚನೆ

ಹೊಸ ಒಡಂಬಡಿಕೆಯ ಕೆಳಗೆ ಹೊಸತನವನ್ನು ಅನುಭವಿಸಬೇಕಾದ ನಾಲ್ಕನೆಯ ಕ್ಷೇತ್ರವು ಪಾಪಗಳ ಪೂರ್ಣ ಕ್ಷಮಾಪಣೆಯ ಜ್ಞಾನದಲ್ಲಿ ಇತ್ತು. “ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ” (ಯೆರೆಮೀಯ 31:34ಬಿ; ನೋಡಿರಿ ಇಬ್ರಿಯ 8:12; 10:17).

### ಶಿಲುಬೆಗಿಂತ ಮೊದಲು ಒಂದು ಅಸಾಧ್ಯತೆ

ಯೇಸುವು ಸಿಲುಬೆಯ ಮೇಲೆ ಸಾಯುವದಕ್ಕಿಂತ ಮೊದಲು, ಸಂಪೂರ್ಣವಾಗಿ ಪಾಪಗಳ ಪರಿಹಾರವು ಅಸಾಧ್ಯವಾದದ್ದಾಗಿತ್ತು. ಇದು ಸತ್ಯವಾಗಿದೆ ಯಾಕಂದರೆ “ರಕ್ತಧಾರೆಯಿಲ್ಲದೆ ಕ್ಷಮಾಪಣೆ ಇರುವದಿಲ್ಲ” (ಇಬ್ರಿಯ 9:22); “ಹೋತ, ಹೋರಿಗಳ ರಕ್ತದಿಂದ ಪಾಪಗಳನ್ನು ತೆಗೆದು ಹಾಕುವುದು ಅಸಾಧ್ಯವಾಗಿದೆ” (ಇಬ್ರಿಯ 10:4). ನೀತಿವಂತ ಹೇಬೇಲನಂಥ (ಮತ್ತಾಯ 23:35) ನಂಬಿಗಸ್ತ ಜನರ ಪಾಪಗಳು ಗಮನಿಸಲ್ಪಟ್ಟಂತೆ ತೋರುತ್ತದೆ. ಯಾಕಂದರೆ ಯೇಸುವು ಬಂದು ತನ್ನ ರಕ್ತವನ್ನು ಸುರಿಸುವನು ಎಂದು ದೇವರು ತಿಳಿದಿದ್ದನು, ಹೀಗಿದ್ದರೂ, ಪರಿಪೂರ್ಣತೆಯಲ್ಲಿ, ಹೇಬೇಲನ ಕುರಿಮರಿಯ ರಕ್ತವು ಅಪರಾಧವನ್ನು ಅಳಿಸಲಿಲ್ಲ; “ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ” ದೇವರ ಕುರಿಮರಿಯ ಕಡೆಗೆ ಮಾತ್ರವೇ ತೋರಿಸಬಲ್ಲದು (ಯೋಹಾನ 1:29).

ಕೊಲೆ ಮತ್ತು ವ್ಯಭಿಚಾರದ ತನ್ನ ಪಾಪಗಳಿಗೆ ಧರ್ಮಶಾಸ್ತ್ರದಲ್ಲಿ ಕ್ಷಮಾಪಣೆಯಿಲ್ಲದಿದ್ದರೂ ದಾವೀದನಿಗೆ ಅವು ಕ್ಷಮಿಸಲ್ಪಟ್ಟಿವೆಯೆಂದು ನಾತಾನನು ಹೇಳಿದನು (2 ಸಮುವೇಲ 12:13). ಪರಿಪೂರ್ಣತೆಯಲ್ಲಿ, ಕ್ಷಮಾಪಣೆಯು ಯೇಸುವು ಸಾಯುವವರೆಗೆ ಸಂಪೂರ್ಣವಾಗುವದಿಲ್ಲ.

ತನ್ನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಟ್ಟವರಿಗೆ (ಮಾರ್ಕ 1:4) ಪಾಪಗಳ ಕ್ಷಮಾಪಣೆಯ ಬಗ್ಗೆ ಯೋಹಾನನ ವಾಗ್ದಾನದೊಂದಿಗೆ ಅದು ಸತ್ಯವಾದದ್ದಾಗಿದೆ. ಅವರು ಬಾಪ್ತಿಸ್ಮ ಹೊಂದಿದಾಗ, ಅವರ ಪಾಪಗಳು ತೆಗೆದು ಹಾಕಲ್ಪಟ್ಟಂತೆ ಇದ್ದವು, ರಕ್ಷಕನ ರಕ್ತವು ಸುರಿಸಲ್ಪಡುವವರೆಗೆ ಅವು ನಿಜವಾಗಿಯೂ ಹೋಗಿರಲಿಲ್ಲ.

### ಶಿಲುಬೆಯ ನಂತರ ಒಂದು ವಾಸ್ತವಿಕತೆ

ಪಂಚಾಶತ್ತಮ ದಿನದ ವರೆಗೆ, ವರ್ಷವರ್ಷವೂ ಪಾಪಗಳ ಜ್ಞಾಪಕವು ಪುನಃ ಮಾಡಲ್ಪಡುತ್ತಿತ್ತು (ಇಬ್ರಿಯ 10:3). ದೇವರು ನೀತಿಯಲ್ಲಿ ಮರೆಯಲಾರನು, ಆದರೆ ನೂತನ ಒಡಂಬಡಿಕೆಯ ಫಲಿತಾಂಶವಾಗಿ ಯೆರೆಮೀಯನ ಮುಖಾಂತರವಾಗಿ ಆತನ ವಾಗ್ದಾನವು, ತಕ್ಷಣವೇ ಮತ್ತು ಪರಿಪೂರ್ಣವಾದ ಪಾಪಗಳ ಪರಿಹಾರವು ಅನುಭವಿಸಲ್ಪಡುವುದು ಎಂಬುದಾಗಿತ್ತು. ಬಾಪ್ತಿಸ್ಮದ ಸಮಯದಲ್ಲಿ ಹಿಂದಿನ

ಸಮಯಕ್ಕೆ ಸಂಬಂಧಿಸಿ ಅವನು ಎಂದೆಂದಿಗೂ ಪರಿಪೂರ್ಣಗೊಳಿಸಲ್ಪಟ್ಟಿದ್ದಾನೆ ಎಂಬ ಭರವಸೆ ಕೊಡಲ್ಪಟ್ಟಿತು (ಇಬ್ರಿಯ 10:14). ಅವನ ಪಾಪಗಳನ್ನು ಇನ್ನೆಂದೂ ಜ್ಞಾಪಿಸಿಕೊಳ್ಳುವದಿಲ್ಲ ಎಂದು ಸುಳ್ಳು ಹೇಳಲಾರದ ಒಬ್ಬಾತನ ವಾಗ್ದಾನದಲ್ಲಿ ಅವನು ಆನಂದಿಸುತ್ತಾನೆ. ನ್ಯಾಯತೀರ್ಮಕೆಯ ದಿನದಲ್ಲಿ ತನ್ನ ಬಾಪ್ತಿಸ್ಮಕ್ಕೆ ಮುಂಚಿತವಾಗಿ ಮಾಡಿದ ಯಾವುದೇ ತಪ್ಪುಗಳಿಗಾಗಿ ಅವನು ಉತ್ತರ ಕೊಡಬೇಕಾಗಿರುವದಿಲ್ಲ.

ಬಾಪ್ತಿಸ್ಮದ ನಂತರದ ಕ್ರೈಸ್ತನು ಮಾಡುವಂಥದ್ದು ಹೊಸ ಒಡಂಬಡಿಕೆಯ ಮುಂದಿನ ನಿಯಮಗಳೊಂದಿಗೆ ಸಾಮರಸ್ಯದಲ್ಲಿ ಎಣಿಸಲ್ಪಡುವುದು, ಆದರೆ ದಾಟಿಹೊದದ್ದು ದಾಟಿ ಹೋದದ್ದಾಗಿರುತ್ತದೆ. ಸೇತುವೆಯ ಕೆಳಗೆ ಹರಿದು ಹೋದ ನೀರನ್ನು ಹಿಂದುರಿಗಿ ತರಲಾಗದಂತೆ ಹಿಂದೆ ಆದದ್ದನ್ನು ಮುಂದೆ ತರಲಿಕ್ಕೆ ಆಗುವದಿಲ್ಲ. ಕ್ರೈಸ್ತನು ತನ್ನ ಬಾಪ್ತಿಸ್ಮಕ್ಕಿಂತ ಮೊದಲಿನ ಪಾಪಗಳು ಕಡುಕೆಂಪಾಗಿದ್ದರೂ, ಬಾಪ್ತಿಸ್ಮದ ನಂತರ ಅವನ ಹೃದಯವು ಉಣ್ಣೆಯಂತೆ, ಹಿಮದಂತೆ ಬೆಳ್ಳಗಾಗಿರುವುದೆಂದು ಸಂತೋಷ ಪಡುವನು (ನೋಡಿರಿ ಯೆಶಾಯ 1:18). ಅವನು ಎಂದೂ ಪಾಪ ಮಾಡಿರುವದಿಲ್ಲ ವೇನೋ ಎಂಬಂತೆ ದೇವರು ಅವನನ್ನು ಎಣಿಸುವನು. ಎರಡು ಒಡಂಬಡಿಕೆಗಳ ಮಧ್ಯದಲ್ಲಿಯ ನಾಲ್ಕನೆಯ ಭಿನ್ನತೆಯು, ನೂತನತೆಯ ನಾಲ್ಕನೆಯ ಕ್ಷೇತ್ರವು ಪಾಪಿಯ ಪ್ರಾಣಕ್ಕೆ ಶುದ್ಧತೆಯನ್ನೂ, ಭರವಸೆಯನ್ನೂ, ಆನಂದವನ್ನೂ, ಮಹಿಮೆಯನ್ನೂ ಮತ್ತು ಐಶ್ವರ್ಯಗಳನ್ನೂ ತರುತ್ತದೆ.

## ಮುಕ್ತಾಯ

ಪ್ರತಿಯೊಬ್ಬ ಕ್ರೈಸ್ತನು ದೇವರು ತನ್ನೊಂದಿಗೆ ಮಾಡಿಕೊಂಡ ಹೊಸ ಒಡಂಬಡಿಕೆಯಲ್ಲಿ ಆನಂದಪಡಲಿ. ಹಳೇ ಒಡಂಬಡಿಕೆಯ ದಿನವು ದಾಟಿಹೋಗಿದೆ, ಶಿಲುಬೆಗೆ ಹಾಕಲ್ಪಟ್ಟಿದೆ. ಯೇಸುವಿನ ಕೊನೆಯ ಮೃತ್ಯುಪತ್ರ ಮತ್ತು ಒಡಂಬಡಿಕೆಯ ಮುಖಾಂತರ ದೇವರೊಂದಿಗೆ ಆಶೀರ್ವಾದಗಳ ಮತ್ತು ಅನ್ಯೋನ್ಯತೆಯ ಹೊಸ ದಿನವು ಬಂದಿರುತ್ತದೆ.

---

ಟಿಪ್ಪಣಿ

[1]ಕೆಲವು ಯಥಾರ್ಥವಾದ ಕ್ರೈಸ್ತರು ಕೆಟ್ಟುಹೋದ, ಹೃದಯವಿಲ್ಲದ, ಕಪಟ ಕಾನೂನು ಬದ್ಧತೆಗಳ ಕೆಟ್ಟು ಹೋಗುವಿಕೆಯನ್ನು ನೋಡಿ (ನೋಡಿರಿ ಮತ್ತಾಯ 15:8), ಪೌಲನಿಂದ ಬರೆಯಲ್ಪಟ್ಟ ಕೆಲವು ವಾಕ್ಯಭಾಗಗಳನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ (ರೋಮಾಪುರ 6:14ರಂತೆ, ಆದರೆ ನೋಡಿರಿ ರೋಮಾಪುರ 3:27; 8:1), ಕ್ರೈಸ್ತತ್ವದಿಂದ ಎಲ್ಲಾ ನಿಯಮವನ್ನು ತೆಗೆದು ಹಾಕಿದ್ದಾನೆಂದು ಹೇಳಿದರು. ಈ ನೋಟವು "ಕಾನೂನು ಬದ್ಧವಾದ" ಎಲ್ಲವನ್ನೂ ತಿರಸ್ಕರಿಸಲು ಅವರನ್ನು ನಡಿಸಿತು. ಹೀಗೆ ಮಾಡುವದರಲ್ಲಿ, ನೀತಿಯುಳ್ಳ ಹೃದಯವನ್ನು ಒಳಗೊಂಡ ದೇವರ ನಿಯಮಕ್ಕೆ ವಿಧೇಯತೆಯು ಉನ್ನತ ಅರ್ಥದಲ್ಲಿ ಕಾನೂನು ಬದ್ಧತೆಯು ಇದೆಯೆಂಬುದನ್ನು ಗುರುತಿಸದೇ ಹೋದರು (2 ತಿಮೊಥೆ 2:5). ಹಳೆಯದರಿಂದ ಹೊಸದ ರೊಳಗೆ ಒಯ್ಯುವಂತೆ "ನಿಯಮ" *(torah)* ಪದವನ್ನು ಯೆರೆಮೀಯ 31:31-34 ಉಪಯೋಗಿ ಸುತ್ತದೆ. ಮೊದಲನೆಯದಕ್ಕೆ ವಿರುದ್ಧವಾಗಿ ಎರಡನೆಯ ಒಡಂಬಡಿಕೆಯಲ್ಲಿ ಸ್ಪಷ್ಟವಾದ ನಾಲ್ಕುವಿಧಗಳ ನೂತನತೆಯು ಇದ್ದರೂ, ನೂತನತೆಯ ಕ್ಷೇತ್ರಗಳಲ್ಲಿ ಒಂದು ನಿಯಮವು ಇಲ್ಲದೇ ಇರುವಂಥದ್ದಲ್ಲ. ಕಾನೂನು ಬದ್ಧತೆಯು ಅದರ ಉನ್ನತ ಅರ್ಥದಲ್ಲಿ ಎರಡರಲ್ಲಿಯೂ ಕಂಡು ಬರುತ್ತವೆ. (ನೋಡಿರಿ ಗಲಾತ್ಯ 6:2; 1 ಕೊರಿಂಥ 9:21; ಯಾಕೋಬ 1:25; 1 ಯೋಹಾನ 3:4; ಇಬ್ರಿಯ 8:10.)

© 2009 Truth for Today